ಅವಳಂತೆಯೇ ಇನ್ನೊಂದು ಕಲ್ಲು ಕುಳಿತಿತ್ತು. ಕಣ್ಣೀರಿನಿಂದಷ್ಟೆ ಆಕೆಗೆ ಜೀವವಿದೆ ಎಂಬುದು ತಿಳಿಯುವಂತಿತ್ತು.

ಸುಮಾರು ಎಂಟು ಗಂಟೆಯ ವೇಳೆಗೆ ಶ್ರೀನಿವಾಸ ಮನೆಗೆ ಬಂದ. ಶ್ರೀಪತಿರಾಯರಿಗೆ ಎಚ್ಚರವಾಗಿತ್ತು. ನೋವು ಕೊಂಚ ಕಡಿಮೆಯಾಗಿತ್ತು. ದಿಂಬಿಗೆ ಒರಗಿ ಕುಳಿತು ಪತ್ನಿ ಕೊಟ್ಟಿದ್ದ ಗಂಜಿಯನ್ನು ಸೇವಿಸುತ್ತಿದ್ದರು. ಶ್ರೀನಿವಾಸ ಮ್ಲಾನವದನಳಾಗಿ ಕುಳಿತಿದ್ದ ರೋಹಿಣಿಯನ್ನು ಕೈಹಿಡಿದು ಹೆಚ್ಚು ಕಡಿಮೆ ಎಳೆದುಕೊಂಡೇ ಬಂದು ಮಾವನವರ ಮುಂದೆ ನಿಂತ.

'ನೀವು ಮಾತನಾಡಿ ಆಯಾಸ ಮಾಡಿಕೋಬೇಡಿ. ನಾನು ಡಾಕ್ಟರ ಹತ್ತಿರ ಮಾತನಾಡಿದ್ದೇನೆ. ನಿಮಗೇನೂ ಆಗೊಲ್ಲ ಅಂದಿದ್ದಾರೆ. ಇಲ್ಲಿನ ಸಾಲವೆಲ್ಲ ತೀರುವ ಹಾಗೆ ವ್ಯವಸ್ಥೆ ಮಾಡಿದ್ದೇನೆ. ನಾಳೆ ಬೆಳಿಗ್ಗೆ ಟ್ಯಾಕ್ಸಿ ಬರುತ್ತೆ. ನಾವೆಲ್ಲ ಹೋಗೋಣ. ನೀವು ನಿಮ್ಮ ಈ ಮಗಳ ಮನೆಯಲ್ಲಿ ಸುಖವಾಗಿರುತ್ತೀರಿ. ಇನ್ನು ನೀವಿಬ್ಬರೂ ಎಲ್ಲಿರುವುದು, ಹೇಗಿರುವುದು ಎಂಬ ಯೋಚನೆ ಮಾಡುವುದು ಬೇಡ.'

ಶ್ರೀಪತಿರಾಯರಿಗೆ ಅಚ್ಚರಿಯಿಂದ ಮಾತೇ ಹೊರಡಲಿಲ್ಲ. ರೋಹಿಣಿಯ ತಾಯಿ ಕೂಡ ಅರ್ಥವಾಗದವರಂತೆ ಮಗಳು ಅಳಿಯರನ್ನೇ ನೋಡಿದರು. ಶ್ರೀನಿವಾಸ ಎಲ್ಲವನ್ನೂ ವಿವರಿಸಿದ. ಸಿದ್ದೇಗೌಡರಿಂದ ಮನೆ ಅಡವಿಟ್ಟು ಪಡೆದಿದ್ದ ಸಾಲ ಬಡ್ಡಿ ಬೆಳೆದು ಎಂಬತ್ತು ಸಾವಿರವಾಗಿತ್ತು. ಅದಕ್ಕೆ ಶ್ರೀನಿವಾಸ ಚೆಕ್ ಬರೆದುಕೊಟ್ಟು ಮನೆಯ ಪತ್ರಗಳನ್ನು ಹಿಂದೆ ತಂದಿದ್ದ. ಸದ್ಯಕ್ಕೆ ಮಾವನವರ ಹೆಚ್ಚಿನ ಚಿಕಿತ್ಸೆಯನ್ನು ಬೆಂಗಳೂರಿನಲ್ಲಿ ನಡೆಸುವುದು. ನಂತರ ಒಳ್ಳೆಯ ಬೆಲೆಬಂದರೆ ಮನೆಯನ್ನು ಮಾರಿ ಬಂದ ಹಣವನ್ನು ಅತ್ತೆಯವರ ಹೆಸರಿನಲ್ಲಿ ಇಡುವುದು, ಬೇಡವೆನಿಸಿದರೆ, ಪೂರ್ತಿ ಆರೋಗ್ಯ ಸರಿಯಾದರೆ ಅವರೇ ಬಂದು ಇಲ್ಲಿ ಪುನಃ ವಾಸಿಸುವುದು. ಅದೆಲ್ಲ ಅವರ ಇಷ್ಟಕ್ಕೆ ಬಿಟ್ಟದ್ದು.

ಅಳಿಯ ಕೊಟ್ಟ ಮನೆಯ ಮೂಲ ಪತ್ರಗಳನ್ನು ಕೈಯಲ್ಲಿ ಹಿಡಿದು ವಿಸ್ಮಯದಿಂದ ಕುಳಿತರು ಶ್ರೀಪತಿರಾಯರು. ಅಷ್ಟೇ ವಿಸ್ಮಯದಿಂದ ರೋಹಿಣಿಯೂ ನೋಡುತ್ತಿದ್ದಳು. ವಾಸುದೇವ ಹೊಸ ಸೀರೆ ತಂದಾಗ ಗೀತಳ ಕಣ್ಣಲ್ಲಿ ಕಂಡುಬರುತ್ತಿದ್ದ ಹೊಳೆಯುವ ಮಿಂಚು ಈಗ ಹೊಳಪು ಕಳೆದುಕೊಂಡಂತೆ ಎನಿಸಿತು. ಅಲ್ಲಿದ್ದ ಎಲ್ಲರ ಕಣ್ಣಮಿಂಚುಗಳು ತನ್ನ ಕಣ್ಣು ಸೇರಿವೆ ಎಂದು ಅವಳಿಗೆ ಭಾಸವಾಯಿತು.

---

**ಎಂ.ಎಸ್. ರಾಣೀರತ್ನಾ ರಾವ್**

ಶಿವಮೊಗ್ಗದವರಾದ ಕತೆಗಾರ್ತಿ ಬಿ.ಎಸ್ಸಿ. ಪದವೀಧರೆ. ಕೆಲಕಾಲ ಶಿಕ್ಷಕಿಯಾಗಿದ್ದರು. ಭದ್ರಾವತಿಯ ಆಕಾಶವಾಣಿಯಲ್ಲಿ ಉದ್ಘೋಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರು. 'ಶಿಶಿರದಲ್ಲಿ ವಸಂತ' ಕಾದಂಬರಿ 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿದೆ. ಕತೆಗಳು ಪತ್ರಿಕೆಗಳಲ್ಲಿ ಅಚ್ಚಾಗಿವೆ. ಪ್ರಸ್ತುತ ಶಿವಮೊಗ್ಗದ ಮತ್ತೂರಿನಲ್ಲಿ ನೆಲೆಸಿದ್ದಾರೆ.